**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 67/2017**

ಪಿ ಡಬ್ಲ್ಯೂ-1

**ದಿನಾಂಕ 03-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಎಮ್.ಸಿಎಸ್. ಪ್ರತಿವಾದಿ ಪರ ವಕೀಲರುಃ**

ದಾವಾ ಸ್ವತ್ತು ಮೂಲತಃ ನಮ್ಮ ತಾತ ಮಾಸ್ತಿಗೌಡರವರಿಗೆ ಸೇರಿದ ಜಮೀನು. ಮಾಸ್ತಿಗೌಡರಿಗೆ ಒಟ್ಟು 3 ಜನ ಮ್ಕಕಳು. ಅವರುಗಳೆಂದರೆ ತಮ್ಮೇಗೌಡ ಅಲಿಯಾಸ್ ಲಕ್ಷ್ಮೇಗೌಡ, ದೇವರಾಜೇಗೌಡ ಮತ್ತು ಪುಟ್ಟೇಗೌಡ. ನಮ್ಮ ತಾತ ಮಾಸ್ತಿಗೌಡರ ಹೆಸರಿನಲ್ಲಿರುವ ಒಟ್ಟು ಜಮೀನು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಆಗಿರುವುದಿಲ್ಲ. ನಮ್ಮ ತಂದೆ ದೇವರಾಜೇಗೌಡರಿಗೆ, ತಮ್ಮೇಗೌಡ ಅಲಿಯಾಸ್ ಲಕ್ಷ್ಮೇಗೌಡ ಮತ್ತು ಪುಟ್ಟೇಗೌಡ ವಿಭಾಗದ ಮುಖಾಂತರ ತಲಾ 1 ಎಕರೆ ಜಮೀನು ಬಂದಿರುತ್ತದೆ.

2. ಸದರಿ ಜಮೀನನ್ನು 3 ಜನ ಮಾಸ್ತಿಗೌಡರ ಮಕ್ಕಳು ಅವರ ತಂದೆಯ ಜೀವಿತದ ಕಾಲದಲ್ಲಿ ವಿಭಾಗವನ್ನು ಮಾಡಿಕೂಂಡಿರುತ್ತಾರೆ. ಅವರೇ ಅಂದಿನಿಂದ ಇಂದಿನವರೆಗೆ ಅವರಿಗೆ ಬಂದ ಭಾಗಾಂಶದಲ್ಲಿ ವ್ಯವಸಾಯವನ್ನು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಹಲವಾರು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಆದರೆ ಎಷ್ಟು ಜಮೀನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಪುಟ್ಟೇಗೌಡರು ಸಹ ತಮ್ಮ ಜಮೀನನ್ನು ಮಾರಾಟ ಮಾಡಿರುತ್ತಾರೆ ಆದರೆ ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

3. ನಮ್ಮ ತಂದೆ ಮತ್ತು ಪುಟ್ಟೇಗೌಡರ ಕಡೆಯಿಂದ ಖರೀದಿ ಮಾಡಿದವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಮ್ಮ ತಂದೆ ಮತ್ತು ಪುಟಟೇಗೌಡರು ಮಾರಾಟ ಮಾಡಿರುವ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೇ ನಂಬರ 171/4 ರಲ್ಲಿ 3

ಗುಂಟೆ ಜಮೀನು ನಮ್ಮ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ಹರದನಳ್ಳಿ ಗ್ರಾಮದ ಸರ್ವೇ ನಂಬರ 104/1 ರಲ್ಲಿ 1 ಎಕರೆ ಜಮೀನು ನಮ್ಮ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಹರದನಳ್ಳಿ ಗ್ರಾಮದ ಸರ್ವೇ ನಂಬರ 129 ರಲ್ಲಿ 34 ಗುಂಟೆ ಜಮೀನು ನಮ್ಮ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ.

4. ಶಿಗೇವಾಳು ಗ್ರಾಮದಲ್ಲಿ 3 ಗುಂಟೆ ಜಮೀನು ನಮ್ಮ ತಂದೆಗೆ ಬಂದಿದ್ದು ಅದು ನನಗೆ ಖಾತೆಯಾಗಿದ್ದು ನಂತರ ನನ್ನ ಗಂಡನಿಗೆ ಬಂದಿರುತ್ತದೆ ಎಂದರೆ ಸರಿ ಸನಂ, 104/1 ರಲ್ಲಿರುವ 1 ಎಕರೆ ಜಮೀನನ್ನು ನಮ್ಮ ತಂದೆ ಸುಜಾತಾ ಕೋಂ ಪುಟ್ಟಸ್ವಾಮಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸ ನಂ. 129 ರಲ್ಲಿನ 34 ಗುಂಟೆ ಜಮೀನನ್ನು ನಮ್ಮ ತಂದೆ 1 ನೇ ಪ್ರತಿವಾದಿಯ ತಂದೆ ತಮ್ಮೇಗೌಡರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**5**. ಸದರಿ ಸ ನಂ 129 ರಲ್ಲಿ 14 ಗುಂಟೆ ಜಮೀನು ಪ್ರಸ್ತುತ ತಮ್ಮೇಗೌಡರ ಸೊಸೆಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ತಮ್ಮೇಗೌಡರ ಹಿಸ್ಸೆಗೆ ಬಂದ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೂ ಭಾಗಾಂಶ ಬರಬೇಕು ಎಂದು ತಿಳಿಸಿರುತ್ತಾರೆ. 3 ನೇ ಪ್ರತಿವಾದಿ ಕೇಶವಮೂರ್ತಿ ನಮ್ಮ ಚಿಕ್ಕಪ್ಪ ಪುಟ್ಟೇಗೌಡರ ಮಗ. ಸ ನಂ. 104 ರಲ್ಲಿ 1 ಎಕರೆ ಜಮೀನನ್ನು ನಮ್ಮ ದೊಡ್ಡಪ್ಪ ತಮ್ಮೇಗೌಡ ಸಿ ಬಿ ಯಲ್ಲಪ್ಪರವರಿಗೆ ಮಾರಾಟ ಮಾಡಿರುತ್ತಾರೇ ಎಂದರೆ ಸರಿ.

6. ಅದೇ ರೀತಿ ಪುಟ್ಟೇಗೌಡರ ಹೆಂಡತಿ ದೇವಮ್ಮ ಅವರಿಗೆ ಬಂದ ಹಿಸ್ಸೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕೇಶವಮೂರ್ತಿಯವರ ಕಡೆಯಿಂದ 3 ಗುಂಟೆ ಜಮೀನನ್ನು ನನ್ನ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಕೇಶವಮೂರ್ತಿಯವರಿಗೆ ನಮ್ಮ ತಂದೆ ದೇವರಾಜೇಗೌಡ 9 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂರದೆ ಸರಿ ಸಾಕ್ಷಿ ನಾವು ಸಹಿ ಮಾಡಿರುವುದಿಲ್ಲ ಎಂದರೆ ತಿಳಿಸಿರುತ್ತಾರೆ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

6. ಸದರಿ ದಾವಾ ಸ್ವತ್ತುಗಳಲ್ಲಿ ಗ್ರಾಮ ಪಂಚಾಯಿತಿಯ ಕಡೆಯಿಂದ ಮನೆಯನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ಮುಂದುಗಡೆ ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ದೊಡ್ಡೆಗೌಡ, ನಾಗಣ್ಣ, ಮರಿಯಮ್ಮ, ತಮ್ಮೇಗೌಡ ಮತ್ತು ಗೋವಿಂದೆಗೌಡರು ದಾವಾ ಸ್ವತ್ತಿನ ಮುಂದುಗಡೆ ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ. ಅವರುಗಳು ದಾವಾ ಸ್ವತ್ತಿನಲ್ಲಿ ಮನೆಯನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

7. ಸದರಿ ದಾವಾ ಸ್ವತ್ತು ಮಾಸ್ತಿಗೌಡರ ಮಗ ತಮ್ಮೇಗೌಡರ ಮತ್ತು ಅವರ ಮಗ 1 ನೇ ಪ್ರತಿವಾದಿ ಮಾಸ್ತಿಗೌಡ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನಂತರ ಸಾಕ್ಷಿ ಮುಂದುವರೆದು ನಂತರ ನಾವೇ ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ನನ್ನ ಗಂಡನ ಹೆಸರು ರಾಮೇಗೌಡ ನಮ್ಮ ಮಾವನ ಹೆಸರು ನಿಂಗಯ್ಯ ಮತ್ತು ನನ್ನನ್ನು ಕಾಳಮ್ಮನಕೊಪ್ಪಲಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

**8.** ಸದರಿ ದಾವಾ ಷೆಡ್ಯೂಲ್ ಸ್ವತ್ತನ್ನು 1ನೇ ಪ್ರತಿವಾದಿ ಮಾಸ್ತಿಗೌಡರ ಕಡೆಯಿಂದ ಖರೀದಿ ಮಾಡಿರುತ್ತೇವೆ. ನನ್ನ ಗಂಡ ರಾಮೇಗೌಡ ಸದರಿ ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ್ದಾಗಿದ್ದು ಅದನ್ನು ನನ್ನ ಗಂಡನಿಗೆ ಕ್ರಯದ ಒಪ್ಪಂದ ಪತ್ರವನ್ನು ಮಾಡಿಕೊಟ್ಟಿರುವುದಾರಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಮತ್ತು ನನ್ನ ಗಂಡ ಇಬ್ಬರು ಒಟ್ಟಾಗಿ ಒಪ್ಪಂದ ಪತ್ರವನ್ನು ಮಾಡಿಕೊಂಡಿದ್ದೇವೆ.

**9**. ನಾವು ದಾವಾ ಷೆಡ್ಯೂಲ್ ಸ್ವತ್ತನ್ನು 1ನೇ ಪ್ರತಿವಾದಿ ಮಾಸ್ತಿಗೌಡರ ಕಡೆಯಿಂದ ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿದೆ. ಸಿ ಬಿ ಯಲ್ಲಪ್ಪ ಮತ್ತು ಸುಜಾತರವರಿಗೆ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದು ಅವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇದೆಯೇ ಎಂದರೆ ಅವರು ಬೇಡ ಎಂದು ತಿಳಿಸಿರುತ್ತಾರೆ. ನಮ್ಮ ತಾತ ಮೃತ ಪಟ್ಟ ದಿನಾಂಕ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ